‘ಸರಿ, ಆಗ್ಲಿ ಅದಕ್ಕೇನು? ಈಗ ನಾನು ಮದ್ವೆ ಮಾಡ್ಕೊಳ್ಳಿಲ್ಲ ಅಂತ ಯಾರು ಅಳ್ತಿದ್ದಾರೆ?’ ಎಂದ ಪೆಡಸಾಗಿ. ‘ಹಂಗಲ್ಲ ಸಾರಂಗ್... ನಿನ್ನಮ್ಮ ಇದ್ದಿದ್ರೆ ಆ ಮಾತು ಬೇರೆ. ಈಗ ನನ್ನ ಜವಾಬ್ದಾರಿಯಲ್ವಾ ಈ ವಿಷ್ಯ’ ಎಂದರು ಪಟ್ಟು ಬಿಡದೆ. ‘ಸರಿ ಈಗ್ಯಾರು ಹೆಣ್ಣು ಕೊಡೋಕೆ ಕಾಯ್ಕೊಂಡಿದಾರೆ?’ ಎಂದ ನಗುತ್ತಾ, ‘ಹೆಣ್ಣಿನ ವಿಷ್ಯ ಬಿಟ್ಟು ಬಿಡು ನಾನೋಡ್ತೀನಿ. ನೀನು ಹೂಂ ಅನ್ನು ಸಾಕು’ ಎಂದಾಗ ಅದು ಆದ ಕಾಲಕ್ಕೆ ತಾನೆ ನೋಡಿಕೊಂಡರಾಯ್ತು ಎನ್ನುವ ಮನೋಭಾವದಿಂದ, ‘ಸರಿ ಸರಿ ಅದ್ಯಾರನ್ನು ಕರ್ಕೊಂಬರ್ತೀಯಾ ಅವಳಿಗೇ ತಾಳಿ ಕಟ್ತೀನಿ’ ಎಂದುಬಿಟ್ಟ. ಗಾಯಕ್ವಾಡರು ಹಿರಿಹಿರಿ ಹಿಗ್ಗುತ್ತಾ, ‘ಮಾತೂಂದ್ರೆ ಮಾತಪ್ಪಾ ನಾನು ಹೇಳಿದ ಹುಡ್ಗಿ ನೀನು ಮಾಡ್ಕೊಂಬೇಕು’ ಎಂದರು. ‘ಪಪ್ಪ ನಾನ್ ಒಂಥರ ವ್ಯಾಗಬಾಂಡ್... ಅಲೀತಾ ಇರ್ತೀನಿ. ಯಾವ ರಂಭೆ ನನ್ನ ಕಟ್ಕೊಂಡು ಮನೇಲಿ ಕಾಯ್ತ ಇದ್ದು ಸಂಸಾರ ಮಾಡ್ತಾಳೇಂತ? ನಿಂಗೊಂಥರ ಭ್ರಮೆ, ಸರಿ ಈಗ ಈ ಮಾತೆಲ್ಲ ಬೇಡ. ಹುಡುಗಿ ಹುಡುಕು. ಆ ಮೇಲೆ ನೋಡಣ’ ಎಂದ. ‘ಹಂಗೇ ಆಗ್ಲಿ ಮಗನೆ, ನಿಂಗೇನೋ ಕಮ್ಮಿ ಆಗಿರೋದು? ಇಲ್ಲಿ ಈ ಎಕರೆಗಟ್ಲೆ ಜಾಗದಲ್ಲಿ ಇಂಥಾಮನೆ. ಮುಂಬೈ ಮನೆ ಬಾಡಿಗೆ, ಬ್ಯಾಂಕ್ ಬ್ಯಾಲೆನ್ಸು ಅಮ್ಮನ ಒಡವೆಗಳೇನು ಕಡಿಮೆ ಇದೆಯಾ? ಅದೆಲ್ಲ ಸೊಸೆಗೆ ತಾನೇ? ಇನ್ನು ಈ ಘರಾಣಗೆ ಎಂಥ ಪ್ರತಿಷ್ಠೆ ಇದೆ ಗೊತ್ತೇನೋ ನಿಂಗೆ. ನಾ ಕೇಳಿದ್ರೆ ಲಕ್ಷ ಲಕ್ಷ ಸುರೀತಾರೆ ನನ್ನ ವಿದ್ಯಾರ್ಥಿಗಳು’ ಇನ್ನೂ ಹೆಮ್ಮೆಯಿಂದ ಹೇಳುತ್ತಿದ್ದರೇನೋ... ಮಗ ಮಧ್ಯೆ ಮಾತು ತುಂಡರಿಸುತ್ತಾ, ‘ಸ್ಟಾಪ್ ಸ್ಟಾಪ್ ಇವೆಲ್ಲ ವರ್ಕ್‌ಔಟ್ ಆಗಲ್ಲ. ಯಾವ ಹುಡುಗೀನೂ ನಿನ್ನ ನೋಡಿ ನಂಗೆ ಮಾಲೆ ಹಾಕಲ್ಲ’ ಎಂದ ಶಾಂತವಾಗಿ. ‘ಯಾಕಾಗಲ್ಲ ಮಗನೇ? ಅದೇ ನಿನ್ನ ತಪ್ಪು ತಿಳಿವಳಿಕೆ, ಆದ್ರೆ ನೀನು ರಂಭೆ ಊರ್ವಶಿ ಬೇಕಂದ್ರೆ ಆಗಲ್ಲ. ಹುಡುಗಿ... ಹುಡುಗಿ ಹಾಗಿರ್ತಾಳೆ ಅಷ್ಟೆ’ ಎಂದರು. ‘ಹೇಯ್ ಪಪ್ಪಾ... ಏನೋ ಮನಸ್ಸಲ್ಲಿಟ್ಕೊಂಡು ಮಾತಾಡ್ತೀದೀಯ... ರೈಟ್... ಯಾರು ಆ ಹುಡುಗಿ?’ ಎಂದ ಕುತೂಹಲದಿಂದ

‘ಸಾರಂಗ್, ಒಳ್ಳೇದಾಯ್ತು ನೀನೇ ಕೇಳಿದ್ದು, ನನ್ನ ಶಿಷ್ಯೆಯೆ ಇದ್ದಾಳಲ್ಲ. ನೀನಾ ಚೌಧರಿ... ಎಂಥಾ ಗಾಯಕಿ... ಸಂಗೀತ ಸರಸ್ವತಿ ಕಣೋ... ನಾಳೆ ಈ ಘರಾಣನ ನಡೆಸಿಕೊಂಡು ಹೋಗೋಕ್ಕೆ ಅವಳಿಗಿಂತ ಇನ್ಯಾರು ಬೇಕು ಹೇಳು? ಅವಳಿಗೆ ಅವಳ ಸಂಗೀತ, ರಿಯಾಜ್... ಇಷ್ಟಿದ್ರೆ ಸಾಕು. ಏನೂ ಬೇಕೆಂದವಳಲ್ಲ. ನಿನ್ನ ಪಾಡಿಗೆ ನೀನು ಎಲ್ಲಿ ಬೇಕೋ ಅಲ್ಲಿ ಸುತ್ತಾಡಿಕೋಬಹುದು. ಬೇಕಾದಾಗ ಮನೆಗೆ ಬಾ ಗೃಹಲಕ್ಷ್ಮೀ, ಸಂಗೀತ ಸರಸ್ವತಿ ಎಲ್ಲಾ ಅವಳೆ. ಇದಕ್ಕಿಂಥ ಇನ್ನೆಂಥ ಹುಡುಗಿಬೇಕು ಹೇಳು?’ ಎಂದಾಗ ‘ಅವಳಾ... ಶೀ ಈಜ್ ವೆರಿ ಆ್ಯವರೇಜ್ ಇನ್ ಲುಕ್ಸ್’ ಎಂದ ನಿರಾಶೆಯಿಂದ.

‘ಅರೆ ಬೇಟಾ, ನಾನಾಗ್ಲೆ ಹೇಳ್ಲಿಲ್ವ ರಂಭೆ ಊರ್ವಶಿಯರು ನಿಂಗೆ ಮಾಲೆ ಹಾಕಲ್ಲ ಅಂತ. ನಮ್ಮ ಮನೆತನಕ್ಕೆ ಹೊಂದೋಂಥದ್ದು ನಾವು ಆರಿಸ್ಕೋಬೇಕು. ಇದು ಪರ್ಫೆಕ್ಟ್ ಆಯ್ಕೆ. ನಂಗೆ ಅನುಮಾನವೇ ಇಲ್ಲ’ ಎಂದ ಅಪ್ಪನನ್ನು ತರುಬುತ್ತಾ, ‘ಪಪ್ಪಾ... ಪರ್ಫೆಕ್ಟ್ ಚಾಯ್ಸ್ ನಿನಗೆ. ನಿನ್ನ ಘರಾಣಕ್ಕೆ. ನಂಗೆ ಹಂಗೇನೂ ಅನ್ನಿಸ್ತಿಲ್ಲ. ಐ ಫ್ರಿಫರ್ ಎ ನೇಚರ್ ಲವರ್. ನಂಥರಾನೆ ಕ್ಯಾಮೆರಾ ತಗಲಾಕ್ಕೊಂಡು ಜೊತೆ ಜೊತೆ ಸುತ್ತುತ್ತಿದ್ರೆ ಎಂಥ ಮಜ ಬರುತ್ತೆ. ಪಪ್ಪಾ ಆನೆಸ್ಟ್ಲಿ ಸ್ಪೀಕಿಂಗ್... ಐ ವಾಂಟ್ ಎ ಗರ್ಲ್ ಹೂ ಈಜ್ ಎ ಲಿಟಲ್ ಮೋರ್ ಪ್ರೆಟಿ’ ಅಂದು ಬಿಟ್ಟಾಗ ಕೆಂಡಗಾರುವ ನುಡಿಗಳಿಂದ, ‘ಇಂಥದ್ದೇ ತಪ್ಪು ನಾನು ಮಾಡಿದ್ದೆ. ಅದಕ್ಕೆ... ನೀನು ಹೀಗಾಗಿದ್ದು. ನಮ್ಮ ವಂಶದಲ್ಲಿ ಸಂಗೀತಾನೇ ಬರದಿರೋ ಮೊದಲ್ನೆ ಗಂಡು ನೀನು. ರೂಪಗೀಪ ಎಲ್ಲಾ ದೀಪ